ಲೇಖನ 05

# ನಾವೆಲ್ಲಿ ಗೂಡು ಕಟ್ಟಲಿ ಹೇಳಿ..

ಆಹಾರಕ್ಕೆ ಬೇಕು ಇವುಗಳಿಗೆ ಜಲಜೀವಿಗಳು. ಗೂಡುಕಟ್ಟಲು ಮರಗಳು. ಹೀಗೆ, ಜಲವನ್ನೂ ನೆಲವನ್ನೂ ಆಶ್ರಯಿಸುವ ಜಲಪಕ್ಷಿಗಳ ಸಂತಾನೋತ್ಪತ್ತಿ ಪ್ರಕ್ರಿಯೆಯು ಬಹಳ ಕುತೂಹಲಭರಿತವಾಗಿದೆ. ಆದರೆ ನಮ್ಮೂರ ಸ್ವಂತ ಬಾನಾಡಿಗಳು ಸದ್ಯಕ್ಕೆ ಮನೆಮಠ ಕಳೆದುಕೊಂಡು ಅನಾಥವಾಗಿವೆ.!

ಚಿತ್ರ ಕೃಪೆ: ರಾಜು ಕಿದೂರು




ಮಳೆ ಮರ - ಜಲ ಪಕ್ಷಿಗಳ ಆಶ್ರಯ ತಾಣ...ನೆನಪು ಮಾತ್ರ...

ಷಟ್ಪಥ ರಾಷ್ಟ್ರೀಯ ಹೆದ್ದಾರಿಯ ಕೆಲಸಗಳು ಆರಂಭಗೊಂಡು ವರುಷಗಳು ಕಳೆದಿವೆ. ಇನ್ನೇನು ತಿಂಗಳುಗಳೊಳಗೆ ಪೂರ್ತಿಗೊಳ್ಳಲಿದೆ. ರಸ್ತೆಯ ಎಡ ಬಲವನ್ನು ಎತ್ತರದ ಗೋಡೆ ವಿಭಜಿಸಿದೆ. ಅಲ್ಲಲ್ಲಿ ಅಂಡರ್ ಗ್ರೌಂಡ್ ಪ್ಯಾಸೇಜ್ ಬೇಕೆಂಬ ಕಾರಣಕ್ಕೆ ನಿರಂತರ ಪ್ರತಿಭಟನೆಗಳು ಜರಗಿವೆ. ಅವುಗಳಲ್ಲಿ ಕೆಲವು ಗೆಲುವನ್ನು ಕಂಡರೆ ಹಲವು ಸೋಲಿನ ಭೀತಿಯಲ್ಲಿವೆ. ಇದು ನಿತ್ಯರೋಗಿ, ಅಭಿವೃದ್ಧಿ ಪ್ರೇಮಿ ಕೇರಳೀಯರ ಹೈವೆ ಕತೆ.!

ಇನ್ನು ಮಾತು ಬಾರದ ಪಕ್ಷಿಗಳ ಕತೆಯೋ.? ಅವುಗಳು ಹೈವೇ ಬದಿಯ ಸಾಮಾನ್ಯ ಎತ್ತರದ ಮರಗಳಲ್ಲಿ ಗೂಡು ಕಟ್ಟುತ್ತಿದ್ದವು. ಮುಖ್ಯವಾಗಿ ಜಲಪಕ್ಷಿಗಳ ಕುಟುಂಬಕ್ಕೆ ಮಳೆಗಾಲದಲ್ಲಿ ಗೂಡು ಕಟ್ಟಲು ರಸ್ತೆ ಬದಿಯಲ್ಲಿ ಮರಗಳೇ ಇಲ್ಲವಾದವು.! ಮರವೊಂದರಲ್ಲಿ ನೂರರಿಂದ ಇನ್ನೂರಷ್ಟು ಗೂಡು ಕಟ್ಟಿ ಸಂತಾನೋತ್ಪತ್ತಿ ಮಾಡುತ್ತಿದ್ದ ಜಲಪಕ್ಷಿ ಕುಟುಂಬಗಳಿಗೆ ಯಾವ ನಷ್ಟ ಪರಿಹಾರವೂ ಸಿಗದೆ ಅನಾಥರಾದವು. ಅದೆಷ್ಟೋ ಕೋಟಿ ರೂಪಾಯಿಯನ್ನು ನಷ್ಟ ಪರಿಹಾರವಾಗಿ ಪಡೆದು ಹೈವೇ ಸಮೀಪದವರು ಧನ್ಯರಾದರೂ ಸಮಾಧಾನವನ್ನು ಕಳೆದುಕೊಂಡರು.!

ಹೀಗೆ ಹೈವೇ ಕತೆ ವ್ಯಥೆಯಾಗಿ ಮುಂದುವರಿಯುತ್ತಲೇ ಇದೆ. ಜೊತೆಗೆ ಅತ್ಯಂತ ವೇಗವಾಗಿ ಮಂಗಳೂರಿನ ಆಸ್ಪತ್ರೆಗಳಿಗೆ ತಲಪುವ ಧಾವಂತದಲ್ಲಿ ಇದೆಲ್ಲವನ್ನೂ ಅವರು ಮರೆತುಬಿಡುತ್ತಿದ್ದಾರೆ ಎಂಬುವುದೂ ನಿತ್ಯಸತ್ಯವಾಗಿದೆ.

ಚಿತ್ರ ಕೃಪೆ: ರಾಜು ಕಿದೂರು



ನಮ್ಮನ್ನು ಕೇಳುವವರು ಯಾರೂ ಇಲ್ಲವಾದರೇ..?

ಹೌದು, ಜಲಪಕ್ಷಿಗಳು ಆಹಾರಕ್ಕಾಗಿ ಜಲಾಶಯಗಳಾದ ಹಳ್ಳ, ಕೆರೆ, ತೋಡು, ನದಿಯನ್ನು ಆಶ್ರಯಿಸುತ್ತವೆ. ಜಲಜೀವಿಗಳೇ ಅವುಗಳ ಮುಖ್ಯ ಆಹಾರ. ಆದರೆ ಅವುಗಳಿಗೆ ಗೂಡು ಕಟ್ಟಿ, ಮೊಟ್ಟೆ ಇಟ್ಟು, ಕಾವು ಕೊಟ್ಟು ಮರಿಮಾಡಲು ಮರಗಳೇ ಬೇಕು. ಮರವೊಂದರಲ್ಲಿ ಅವು ಕೇವಲ ಒಂದು ಗೂಡನ್ನು ಕಟ್ಟಲಾರವು. ಯಾಕೆಂದರೆ ಅವು ಕಾಲನಿ ನಿವಾಸಿಗಳು.! ಮರದಲ್ಲಿನ ರೆಂಬೆ ಕೊಂಬೆಗಳ ವಿಸ್ತಾರವನ್ನು ಅಳತೆ ಮಾಡಿ ಸಾಧ್ಯವಿರುವಷ್ಟು ಗೂಡುಗಳನ್ನು ಜಲ ಪಕ್ಷಿಗಳು ಗುಂಪಾಗಿ ಕಟ್ಟುತ್ತವೆ. ಆದ್ದರಿಂದ ಒಂದು ಮರದಲ್ಲಿ ನಮಗೆ ನೂರಕ್ಕಿಂತಲೂ ಅಧಿಕ ಹಕ್ಕಿ ಕುಟುಂಬಗಳನ್ನು ನೋಡಲು ಸಾಧ್ಯವಾಗುತ್ತದೆ. ಮೂರ್ನಾಲ್ಕು ವರ್ಗದ ಜಲ ಪಕ್ಷಿಗಳು ಸಹ ಒಂದೇ ಮರದಲ್ಲಿ ಗೂಡು ಕಟ್ಟುವುದೂ ಇದೆ. ಇದೇ ಕಾರಣಕ್ಕೆ ಪಕ್ಷಿ ವಿಜ್ಞಾನದಲ್ಲಿ ಇವುಗಳನ್ನು ಕಾಲನಿ ನಿವಾಸಿಗಳೆಂದು ಕರೆಯುತ್ತಾರೆ. ಸದ್ಯ ಇಂತಹ ಸೃಷ್ಟಿಯ ಕೌತುಕಮಯ ಸನ್ನಿವೇಶವನ್ನು ನೋಡಬೇಕಾದರೆ ಹೊಸಂಗಡಿಯ ರೈಲ್ವೇ ಗೇಟ್ ಬಳಿಯ ಮಳೆ ಮರವನ್ನೊಮ್ಮೆ ಗಮನಿಸಿದರೆ ಸಾಕು. ಕೊಳದ ಬಕ ಹಾಗೂ ರಾತ್ರಿ ಬಕಗಳ ಅಂದಾಜು ನಲ್ವತ್ತರಷ್ಟು ಗೂಡುಗಳು ಸದ್ಯ ಮರದಲ್ಲಿವೆ.! ಕಾಸರಗೋಡು ಜಿಲ್ಲೆಯಲ್ಲಿ ಜಲಪಕ್ಷಿಗಳಿಗೆ ರೈಲ್ವೇ ಇಲಾಖೆಯವರು ಬಾಕಿ ಉಳಿಸಿರುವ ಏಕೈಕ ಮರವಿದೆ. ಆದರೆ ಅಭಿವೃದ್ಧಿಯ ನೆಪದಲ್ಲಿ ಯಾವಾಗ ಧರೆಗುರುಳಲಿದೆ ಎಂಬ ಆತಂಕ ಎದುರಿಸುತ್ತಿದೆ. ಯಾಕೆಂದರೆ ಆ ಮರ ಹೈವೇ ರಸ್ತೆಗೆ ತೀರಾ ಸಮೀಪದಲ್ಲಿದೆ.

ಕಾಸರಗೋಡಿನಲ್ಲಿ ಜಲ ಪಕ್ಷಿಗಳು ಗುಂಪಾಗಿ ಗೂಡು ಕಟ್ಟುತ್ತಿದ್ದ ಹದಿಮೂರು ಮರಗಳನ್ನು ಹೈವೆ ವಿಸ್ತರಣೆಗಾಗಿ ಕಡಿಯಲಾಯಿತು. ಇವುಗಳಲ್ಲಿ ಹನ್ನೊಂದು ಸಹ ಬಹಳ ವಿಸ್ತಾರವಾಗಿ ಚದುರಿಕೊಂಡ ಮಳೆ ಮರಗಳಾಗಿದ್ದವು. ಆರುನೂರಕ್ಕಿಂತಲೂ ಹೆಚ್ಚಿನ ಗೂಡುಗಳನ್ನು ಜಲ ಪಕ್ಷಿಗಳು ಪ್ರತಿ ವರುಷವೂ ಈ ಮರಗಳಲ್ಲಿ ಕಟ್ಟುತ್ತಿದ್ದವು. ಕಳೆದ ಎಂಟು ವರ್ಷಗಳಿಂದ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಕಾಸರಗೋಡಿನ ಪಕ್ಷಿ ಪ್ರೇಮಿ ತಂಡ ನಡೆಸಿಕೊಂಡು ಬರುತ್ತಿದ್ದ ಜಲ ಪಕ್ಷಿಗಳ ಗಣತಿಯಲ್ಲಿ ಈ ಅಂಕಿ ಅಂಶಗಳು ಬಹಿರಂಗಗೊಂಡಿವೆ. ಕಳೆದ ಮಳೆಗಾಲದಲ್ಲಿ ಸರ್ವೇ ನಡೆಯಿತಾದರೂ ಕಡಿಯಲ್ಪಟ್ಟ ಮರಗಳಿಗೆ ಬದಲಾಗಿ ಪಕ್ಷಿಗಳು ಬೇರೆಲ್ಲಿಯೂ ಗೂಡು ಕಟ್ಟಿದ್ದನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲದಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಹಾಗಾದರೆ ಜಲ ಪಕ್ಷಿಗಳು ಎಲ್ಲಿ ಹೋದವು..? ಎಲ್ಲಿ ಗೂಡು ಕಟ್ಟಿದವು..? ಜಲಾಶಯಗಳ ಆರೋಗ್ಯದ ದೃಷ್ಟಿಯಲ್ಲಿ ಜಲ ಪಕ್ಷಿಗಳ ಸಂತತಿ ಕಡಿಮೆಯಾಗುವುದು ಮನುಕುಲಕ್ಕೂ ಬಾಧೆಯನ್ನು ತರಬಲ್ಲದು. ಆದ್ದರಿಂದ ನೀರುಪಕ್ಷಿಗಳು ಬೊಬ್ಬಿಡುತ್ತಿವೆ. "ನಾವೆಲ್ಲಿ ಗೂಡು ಕಟ್ಟಲಿ ಹೇಳಿ..?




ಕಡಿದುರುಳಿಸಿದ ಮರವನ್ನೇ ಆಶ್ರಯಿಸಿದ ಕೊಳದ ಬಕಗಳು

**ಜಲ ಪಕ್ಷಿಗಳ ವಿಶೇಷತೆಗಳು**

1.ಪಕ್ಷಿ ನಿರೀಕ್ಷಕರ ಸರ್ವೇ ಆಧಾರದ ಮೂಲಕ ಸುಮಾರು ಆರು ನೂರರಷ್ಟು ಜಲ ಪಕ್ಷಿಗಳ ಗೂಡುಗಳಿಗೆ ಹೊಸಂಗಡಿ, ಉಪ್ಪಳ, ಬಂದ್ಯೋಡು, ಚೆರ್ಕಳ, ಕಾಂಜ್ಞಂಗಾಡಿನಲ್ಲಿನ ಹದಿಮೂರು ಮರಗಳು ಆಶ್ರಯ ನೀಡಿದ್ದವು. ಆದರೆ ಅವುಗಳು ಹೈವೇ ನಿರ್ಮಾಣಕ್ಕೆ ಕಡಿಯಲ್ಪಟ್ಟವು.

2.ಹೆಚ್ಚಾಗಿ ರಿಕ್ಷಾ ಸ್ಟ್ಯಾಂಡ್ ಮತ್ತು ಬಸ್ ಸ್ಟ್ಯಾಂಡ್ ಸನಿಹದಲ್ಲಿರುವ ಮರಗಳನ್ನು ಇವುಗಳು ಗೂಡು ಕಟ್ಟಲು ಆಯ್ಕೆಮಾಡುತ್ತವೆ. ಕಾರಣ ಮನುಷ್ಯರಿದ್ದಲ್ಲಿ ಇತರ ಪ್ರಾಣಿಗಳು ತೊಂದರೆ ಕೊಡಲಾರವು ಎಂಬ ವಿಶ್ವಾಸ ಅವುಗಳದ್ದು.!

3.ಮರಿಗಳಿಗೆ ಹೊಟ್ಟೆ ತುಂಬಾ ಮೀನುಗಳು ಸಿಗಲಿವೆ ಎಂಬುದನ್ನು ಗ್ಯಾರಂಟಿ ಮಾಡುವ ಹಕ್ಕಿಗಳು ಗೂಡುಕಟ್ಟುವ ಮರಗಳನ್ನು ಆಯ್ಕೆಮಾಡುವಾಗ ಮೀನು ಮಾರುಕಟ್ಟೆ ಅಥವಾ ಜಲಾಶಯಗಳು ಹತ್ತಿರ ಇವೆಯೋ ಎಂಬುವುದನ್ನೂ ಸಹ ಗಮನಿಸುವುದಿದೆ.

4.ಜೂನ್ ನಿಂದ ಆರಂಭಿಸಿ ಸೆಪ್ಟೆಂಬರ್ ಕೊನೆಯವರೆಗೆ ಜಲ ಪಕ್ಷಿಗಳ ಸಂತಾನೋತ್ಪತ್ತಿ ಕಾಲ. ಆದರೆ ಮರಿಗಳು ದೊಡ್ಡದಾಗಲು ಕೆಲವೊಂದು ವಾರಗಳ ವ್ಯತ್ಯಾಸ ಆಗುವುದಿದೆ.

5.ಒಣ ಗೆಲ್ಲುಗಳನ್ನು ಬಳಸಿ ಗೂಡು ಕಟ್ಟುತ್ತಿದ್ದವು ಜಲಪಕ್ಷಿಗಳು. ಆದರೆ ಇದೀಗ ಒಂದೆರಡು ಪ್ಲಾಸ್ಟಿಕ್ ಹಗ್ಗಗಳನ್ನೂ ಬಳಸಲು ಆರಂಭಿಸಿರುವುದನ್ನು ಕಳೆದ ವರ್ಷದ ಜಲಪಕ್ಷಿಗಳ ಸರ್ವೇಯಲ್ಲಿ ಪಕ್ಷಿ ನಿರೀಕ್ಷಕರು ಪತ್ತೆಹಚ್ಚಿದ್ದಾರೆ.

6.ಗೂಡೊಂದರಲ್ಲಿ ಸಾಮಾನ್ಯವಾಗಿ ಎರಡರಿಂದ ಐದು ಮೊಟ್ಟೆಗಳನ್ನಿಡುತ್ತವೆ. ಇಪ್ಪತ್ತರಿಂದ ಮೂವತ್ತು ದಿನಗಳಲ್ಲಿ ಬಿರಿಯುತ್ತವೆ. ಮುಂದಿನ ಒಂದೆರಡು ತಿಂಗಳುಗಳೊಳಗೆ ಮರಿಗಳು ಹಾರಲು ಸ್ವತಂತ್ರವಾಗುತ್ತವೆ.

7.ಜಲ ಜೀವಿಗಳನ್ನು ಇಷ್ಟಪಡುವ ಈ ಹಕ್ಕಿಗಳು ಅದರಲ್ಲೂ ರೋಗಗ್ರಸ್ತವಾದ ಮೀನುಗಳನ್ನು ಬೇಗನೆ ಬೇಟೆಯಾಡುತ್ತವೆ. ಹೀಗೆ ಇತರ ಮತ್ಸ್ಯಗಳಿಗೆ ರೋಗ ತಡೆಗಟ್ಟದಿರಲು ಮಧ್ಯ ವರ್ತಿಗಳಾಗಿ ಜಲ ಪಕ್ಷಿಗಳು ಕಾರ್ಯನಿರ್ವಹಿಸುತ್ತವೆ.

8.ಮರಿಗಳು ಹಾರಿ ಹೋಗುವ ದಿನಗಳು ಹತ್ತಿರವಿರುವಾಗ ಸಾಮಾನ್ಯವಾಗಿ ಗೂಡುಗಳು ಹಾಳಾಗುತ್ತವೆ. ಕ್ರಮೇಣ ಗೂಡಿನ ಪಳೆಯುಳಿಕೆಗಳು ಕಾಣ ಸಿಕ್ಕದಂತೆ ಮರವು ಶುಚಿಯಾಗುತ್ತದೆ.

9.ಮರಿಗಳು ದೊಡ್ಡದಾದಂತೆ ಗೂಡು ಬಿಟ್ಟು ಅದೇ ಮರದ ಇತರ ಕೊಂಬೆಗಳಲ್ಲಿ ವಾಸಿಸಲು ಆರಂಭಿಸುತ್ತವೆ. ನಿಧಾನವಾಗಿ ಅಕ್ಕ ಪಕ್ಕದ ರೆಂಬೆಗಳಿಗೆ ಹಾರಲು ಪ್ರಯತ್ನಿಸಿ ಜಯಶೀಲರಾಗುತ್ತಾರೆ. ಹೀಗೆ ಹಾರಾಟ ಕಲಿಯಲು ಗೂಡು ಕಟ್ಟಿದ ಮರವನ್ನೇ ಆಶ್ರಯಿಸುವ ವಿಶೇಷ ಸ್ವಭಾವ ಜಲ ಪಕ್ಷಿಗಳಿಗಿವೆ.

10.ಸಂತಾನೋತ್ಪತ್ತಿ ಕಾಲದಲ್ಲಿ ಮರಿಗಳಲ್ಲದೆ ರಕ್ಷಕ ಹಕ್ಕಿಗಳ ಆಹಾರ ಸೇವನೆಯೂ ಹೆಚ್ಚು. ಮಾತ್ರವಲ್ಲ ಗೂಡು ಕಟ್ಟಿದ ಮರದಲ್ಲೇ ಅವುಗಳು ದಿನರಾತ್ರಿ ಕಳೆಯುತ್ತವೆ. ಇದರಿಂದ ಮರದ ಕೆಳಗೆ ಹಕ್ಕಿ ಹಿಕ್ಕೆಗಳು ತುಂಬುತ್ತವೆ. ಇದು ಮರವಿರುವ ಪರಿಸರವನ್ನು ದುರ್ವಾಸನೆಯಿಂದ ಬೀರುವಂತೆ ಮಾಡುವುದರಿಂದಲೇ ಇಂತಹ ಕಾಲೋನಿ ಮರಗಳನ್ನು ಕಡಿಯಬೇಕೆಂಬ ಒತ್ತಾಯ ಕೇಳಿಬರುತ್ತದೆ.

**ರಾಜು ಕಿದೂರು**
ಅಧ್ಯಾಪಕರು,
ಹೋಲಿ ಫ್ಯಾಮಿಲಿ ಅನುದಾನಿತ ಶಾಲೆ,
ಕುಂಬಳೆ, ಕೇರಳ
ಇಮೇಲ್: rajukidoor@gmail.com